ಶ್ರೀ• ಮೋಹನ್ ಪಿ ಸಿ (ಚಿಕ್ಕಪೇಟೆ)114(358)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ಕರ್ನಾಟಕ ಗೃಹ ಮಂಡಳಿಯಿಂದ ಸೂರ್ಯನಗರ ಹಾಗೂ ಬಂಡೇ ಮರಗಳಲ್ಲಿ ಸಂಯುಕ್ತ ವಸತಿ ಯೋಜನೆ ಏಕಕಾಲದಲ್ಲಿ ಕೈಗೆತ್ತಿಕೊಂಡ ನಿವೇಶನ, ಮನೆ ಹಾಗೂ ಫ್ಲಾಟ್‌ಗಳ ಹಂಚಿಕೆಗೆ ಒಂದೇ ದಿನ ಎರಡು ಯೋಜನೆಗಳಿಗೆ ಅಧಿಸೂಚನೆ ಹೊರಡಿಸಿರುವುದು ನಿಜವೇ,

2) ಹಾಗಿದ್ದಲ್ಲಿ, ಸೂರ್ಯನಗರದಲ್ಲಿ ಕಾಮಗಾರಿ ಪೂರ್ಣಮುಗಿದಿದ್ದು ಬಂಡೇಮರದಲ್ಲಿ ಅರ್ಧದಷ್ಟು ಕಾಮಗಾರಿ ಮುಗಿಯದಿರಲು ಕಾರಣವೇನು ತಿಳಿಸುವುದು,

3)ಇದರಿಂದಾಗಿ ಫಲಾನುಭವಿಗಳು ತೊಂದರೆಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

4) ಹಾಗಿದ್ದಲ್ಲಿ, ಬಂಡೇಮರದ ಕಾಮಗಾರಿ ಯಾವಾಗ ಮುಗಿಯಲಿದೆ ಹಾಗೂ ಇತರ ಸೌಲಭ್ಯವನ್ನು ಯಾವಾಗ ಒದಗಿಸಲಾಗುತ್ತದೆ(ವಿವರ ನೀಡುವುದು)

ಶ್ರೀ ಡಿ ಟಿ ಜಯಕುಮಾರ್

1) ಹೌದು, ಕರ್ನಾಟಕ ಗೃಹ ಮಂಡಳಿಯಿಂದ ಸೂರ್ಯನಗರ/ ಬಂಡೇ ಮರಗಳಲ್ಲಿ ಸಂಯುಕ್ತ ವಸತಿ ಯೋಜನೆಗಳಿಗೆ ದಿನಾಂಕ, 28–08–2006 ರಂದು ಹಂಚಿಕೆಗೆ ಪ್ರಕಟಣೆ ನೀಡಲಾಗಿದೆ

2) ಬಂಡೇಮರ ಬಡಾವಣೆಯಲ್ಲಿ ಪ್ರಸ್ತುತ ಶೇಕಡ 80ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ರಸ್ತೆಗಳಿಗೆ ಡಾಂಬರ್ ಹಾಕುವ, ನಿವೇಶನಗಳಿಗೆ ಬೌಂಡರಿ ಕಲ್ಲುಗಳನ್ನು ಹಾಕುವ ಕಾಮಗಾರಿ, ಈ ಬಡಾವಣೆಗೆ ವಿದ್ಯುತ್ ಒದಗಿಸುವ ಕಾಮಗಾರಿಗಳು ಮಾತ್ರ ಬಾಕಿ ಇದ್ದು ಈ ಕೆಲಸಗಳನ್ನು

ಕೂಡ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಈ ಬಡಾವಣೆಯಲ್ಲಿ ಹಂಚಿಕೆ ಪಡೆದ ಹಂಚಿಕೆದಾರರಿಗೆ ಕೊನೆಯ ಕಂತು ಪಾವತಿಗಾಗಿ ಅಕ್ಟೋಬರ್ 2007 ರವರೆಗೆ ನಿಗದಿತ ಕಾಲಾವಧಿ ಇರುವುದರಿಂದ ಹಂಚಿಕೆದಾರರು ಮಂಡಳಿಗೆ ಸ್ವತ್ತಿನ ಪೂರ್ತಿ ಹಣ ಪಾವತಿಸಿದ ನಂತರ ಹಂಚಿಕೆದಾರರಿಗೆ ನಿವೇಶನಗಳನ್ನು/ಮನೆಗಳನ್ನು ಸ್ವಾಧೀನ ನೀಡಲಾಗುವುದು ಆದಷ್ಟು ಬೇಗನೆ ಮಂಡಳಿಯ ಬಡಾವಣೆಗೆ ಮಾಡಬೇಕಾದ ಎಲ್ಲಾ ಮೂಲ ಭೂತ ಸೌಕರ್ಯಗಳ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು

3) ಹಂಚಿಕೆದಾರರಿಗೆ ಮಂಡಳಿಯ ಸ್ವತ್ತನ್ನು ಇನ್ನು ಸ್ವಾಧೀನ ನೀಡದೇ ಇರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ, ಸದರಿ ವಿಚಾರವಾಗಿ ಹಂಚಿಕೆದಾರರು ತೊಂದರೆಗೆ ಸಿಲುಕಿರುವುದು ಕೂಡ ಮಂಡಳಿಗೆ ದೂರುಗಳು ಬಂದಿರುವುದಿಲ್ಲ

4) ಕ್ರಮ ಸಂಖ್ಯೆ.2 ರಲ್ಲಿ ವಿವರಿಸಿರುವಂತೆ ಮೂಲ ಸೌಲಭ್ಯಗಳಾದ ರಸ್ತೆ, ವಿದ್ಯುಚ್ಚಕ್ತಿ, ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಗಳ ಸೌಲಭ್ಯಗಳೊಂದಿಗೆ ಸುಮಾರು ಆರು ತಿಂಗಳೊಳಗಾಗಿ ಒದಗಿಸಲಾಗುವುದು